



**ನಕ್ಷತ್ರ ದೇವತೆ**
(ಕವಿತೆಗಳು)
ಲೇ: ಜೀವಯಾನದ
ಎಸ್ ಮಂಜುನಾಥ್
ಪು: 130 ಬೆ: ರೂ.120
ಪ್ರ: ಪ್ರಕೃತಿ ಪ್ರಕಾಶನ,
ನಂ. 20, ಪುಟ್ಟಣ್ಣ ರಸ್ತೆ,
ಗಾಂಧಿ ಬಜಾರ್,
ಬೆಂಗಳೂರು – 560 004

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.

ಇದೊಂದು ಬಗೆಯಲ್ಲಿ ಕಲ್ಲ ಪಾರಿವಾಳಗಳ ಬೇಟದ ಹಾಗೆ. ಪಾರಿವಾಳ ಹಾರುವ ಹಕ್ಕಿ. ಬೇಟ ದೇಹ ಮನಸ್ಸು ಒಂದಾಗಿ ತೊಡಗುವ ಕ್ರಿಯೆ. ಆದರೆ ಇಲ್ಲಿ ಅದರ ಶಿಲ್ಪ ಕಲ್ಲಿನಲ್ಲಿ ಸ್ಥಾವರಗೊಂಡಿದೆ! ಹಾಗೆಯೇ, ಸಮುದ್ರವನ್ನೇ ಕಂಡಿರದ ಮಗಳು ನಡುಮನೆಯೊಳಗೆ ಕಾಗದದ ದೋಣಿಯನ್ನಿಟ್ಟದ್ದೇ ನೆಲವೆಲ್ಲ ಜಲವಾಗಿ ನಾವು ನಾವೆ ಅಲೆಗಳಾಗಿ ಏರಿಳಿಯುವಂತೆ ಆಗುವುದು! 'ಬಾನೆದೆಯಿಂದ ನಿನ್ನ ಎದೆಬಾನೊಳಗೆ/ ಬಂದುಬಿಡುವೆ; ಇಲ್ಲದಿದ್ದರೆ ನೀನೇ/ ಆಗುವೆ ನಿನ್ನ ಹೊರಗೆ!' ಎನ್ನುತ್ತಾಳೆ ಮಂಜುನಾಥರ ಪ್ರಸ್ತುತ ಸಂಕಲನದ 'ನಕ್ಷತ್ರದೇವತೆ'! ಆದರೆ ಅದಕ್ಕಾಗಿ ಕಣ್ಣಬೆಳಕನ್ನು ಎರೆದು ಉದ್ದೀಪಿಸಬೇಕು ಕವಿ, ಆರಿ ಹೋಗದಂತೆ ಅವಳು! ನೀವು ಹೀಗೆ ಮಾಡದೇ ಹೋದರೆ 'ನೀನೇ ಆಗುವೆ ನಿನ್ನ ಹೊರಗೆ!' ಎಂಬ ನುಡಿಯಿದೆ ಇಲ್ಲಿ. ಹಕ್ಕಿನೋಟ ಒದಗಿಸುವ ಸಮನ್ವಯದಲ್ಲೂ ಅಸ್ಮಿತೆಯ ಹಕ್ಕು ಮಂಡಿಸುವ ಪಂಚವರ್ಣದ ಗಿಣಿಯ ಹಾಜರಿಯನ್ನು ಅವರು ಮರೆಯುವುದಿಲ್ಲ. ಸ್ಥಾವರವನ್ನು ಕುರಿತು ಬರೆಯುವಾಗ ಒಂದು ಕಲ್ಲು, ಶಿಲ್ಪವಾಗಿ ಅರಳಿ ರಸಿಕನ ಮನಸ್ಸಿನಲ್ಲಿ ಜೀವಂತಗೊಳ್ಳುವುದನ್ನು ಅವರು ಮರೆಯುವುದಿಲ್ಲ. ಅವರಿಗೆ ಕಲ್ಲು ಬೇರೆಯಲ್ಲ, ಜೀವಜಂತು ಬೇರೆಯಲ್ಲ. ಬಾಹುಬಲಿಯ ಮೈಮೇಲೆ ಹರಿದಾಡುವ ಹಾವನ್ನು, ಪದತಲದ ಚಿಟ್ಟೆಯನ್ನೂ ನೆತ್ತಿ ಮೇಲಿನ ಗರುಡನನ್ನೂ ಒಟ್ಟಿಗೇ ಕಟ್ಟಿಕೊಡುವ ಕವಿ ಅವರು. ಮಣ್ಣು, ನೆಲ, ಕಲ್ಲು, ಶಿಲೆ ಎಲ್ಲ ಆಗಿರುವ ಇದು ಅವರ ಕೃಷಿಭೂಮಿ ಕೂಡ, ಜೀವಸೆಲೆ ಕೂಡ.

ಇದು ಸಾಮಾನ್ಯವಾಗಿ ನಾವು ಕಾಣುವ